ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ದಿನಾಂಕ 30-8-94ರಂದು ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯಲ್ಲಿರುವ 77 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೂಲ್ಕಿ ಪೋಲೀಸ್ ಸ್ಟೇಷನ್ನಿನ ಜೀಪಿನ ಬಗ್ಗೆ

561 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ ಅಧಿವೇಶನದಲ್ಲಿ ಏಪ್ರಿಲ್ 1994ರ ಮೊದಲು ಮೂಡಬಿದಿರೆ-ಮೂಲ್ಕಿ ಸ್ಟೇಷನ್ನಿಗೆ ಜೀಪು ಒದಗಿಸಲಾಗುವುದೆಂದು ಸರ್ಕಾರದವರು ಆಶ್ವಾಸನೆ ನೀಡಿದ್ದು ನಿಜವೇ?*

ಆ) *ಹಾಗಿದ್ದಲ್ಲಿ ಈ ತನಕ ಜೀಪು ಒದಗಿಸದಿರಲು ಕಾರಣವೇನು? ಹಾಗೂ ಎಂದು ಒದಗಿಸಲಾಗುವುದು?*

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು

ಆ) ಮೂಲ್ಕಿಯು ಸರ್ಕಲ್ ಪೋಲೀಸ್ ಕಛೇರಿ ಹಾಗೂ ಪೋಲೀಸ್ ಠಾಣೆ ಹೊಂದಿರುತ್ತದೆ. ಸರ್ಕಲ್‌ಗೆ ಜೀಪು ಒದಗಿಸಲಾಗಿದ್ದು, ಪೋಲೀಸ್ ಠಾಣೆಗಳಾದ ಮೂಡಬಿದಿರೆ-ಮೂಲ್ಕಿಗೆ ಮೋಟಾರ್ ಸೈಕಲ್‌ಗಳನ್ನು ಒದಗಿಸಲಾಗಿದೆ. ಈ ಪೋಲೀಸ್ ಠಾಣೆಗಳಿಗೆ ಮುಂಬರುವ ವರ್ಷಗಳಲ್ಲಿ ಹಣ ಒದಗಿಸಿಕೊಂಡು ಆದ್ಯತೆ, ಅಗತ್ಯತೆಯನ್ನು ಅನುಸರಿಸಿ ಜೀವನ್ನು ಒದಗಿಸಲಾಗುವುದು.

ಮುಖ್ಯಮಂತ್ರಿಯವರ ವಿದೇಶಿ ಪ್ರವಾಸದ ಬಗ್ಗೆ

559 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಹಾಲಿ ಮುಖ್ಯಮಂತ್ರಿಯವರು ಇತ್ತೀಚೆಗೆ ಅಮೇರಿಕಾಕ್ಕೆ ನೀಡಿದ ಭೇಟಿ ಅಧಿಕೃತವೇ ಅಥವಾ ಖಾಸಗಿಯೇ ಇವರೊಡನೆ ಹೋಗಿದ್ದವರು ಯಾರು ಯಾರು ಈ ಪ್ರವಾಸದಿಂದ ಸರ್ಕಾರಕ್ಕೆ ಆದ ಖರ್ಚು ಎಷ್ಟು?*

ಆ) *ಇವರು ಭೇಟಿಯಾದ ಪ್ರಮುಖ ವ್ಯಕ್ತಿಗಳು ಅಥವಾ ಸಂಸ್ಥೆಗಳು ಯಾವುವು, ಚರ್ಚಿಸಿದ ವಿಷಯಗಳು ಯಾವುವು, ಅವುಗಳ ಫಲಶ್ರುತಿಯೇನು ಹಾಗೂ ವಾಪಸ್ಸಾದ ನಂತರ ಈ ವಿಷಯಗಳಲ್ಲಿ ಆಗಿರುವ ಬೆಳವಣಿಗೆಗಳು ಏನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಇದು ಒಂದು ಖಾಸಗಿ ಭೇಟಿಯಾಗಿದ್ದು, ನನ್ನ ಜೊತೆ ನನ್ನ ಪತ್ನಿಯವರು ಪ್ರವಾಸ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಖರ್ಚಾಗಿಲ್ಲ.

ಆ) ಪ್ರವಾಸವು ಖಾಸಗಿಯಾಗಿದ್ದರೂ ಸಹ ರಾಜ್ಯದ ಹಿತ ದೃಷ್ಟಿಯ ಸಲುವಾಗಿ ಪ್ರಯತ್ನ ಮಾಡಲಾಗಿದೆ. ರಾಜ್ಯದ ವಿವಿಧ ಯೋಜನೆಗಳಿಗೆ ಅತ್ಯಾವಶ್ಯಕವಾಗಿರುವ ಬಂಡವಾಳ ಹೂಡಿಕೆ ಬಗ್ಗೆ ಮತ್ತು ತಂತ್ರಜ್ಞಾನದ ಬಗ್ಗೆ ಅಮೇರಿಕ ದೇಶದ ಕೆಲವು ಪ್ರತಿಷ್ಠಿತ ಕಂಪೆನಿ ಸಂಸ್ಥೆಗಳ ಮುಖ್ಯಸ್ಥರುಗಳೊಂದಿಗೆ ಭೇಟಿಯನ್ನು ಈ ಪ್ರವಾಸ

ಸಂದರ್ಭದಲ್ಲಿ ಮಾಡಲಾಗಿದೆ. ಭೇಟಿಯಾದ ಮತ್ತು ಚರ್ಚೆ ನಡೆಸಿದ ಕಂಪನಿ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

ಸ್ಥಳ	ಕಂಪೆನಿ/ಸಂಸ್ಥೆ	ಉದ್ದೇಶ
ವಾಷಿಂಗ್ಟನ್	ವಿಶ್ವಬ್ಯಾಂಕ್ ಮುಖ್ಯಸ್ಥರೊಂದಿಗೆ	ವಿದ್ಯುತ್ ಯೋಜನೆಗಳ ಕುರಿತು
ವಾಷಿಂಗ್ಟನ್	ನಾರ್ತ್ ಈಸ್ಟ್ ಎನರ್ಜಿ ಸರ್ವೀಸಸ್	ರಾಯಚೂರು ವಿದ್ಯುತ್ ಯೋಜನೆ
ವಾಷಿಂಗ್ಟನ್	ಚಿಕಾಗೋ ಪವರ್	ಮೈಸೂರು ವಿದ್ಯುತ್ ಯೋಜನೆ
ವಾಷಿಂಗ್ಟನ್	ವಿಷ್ಕನ್‌ಪವರ್ ಕಂ.	ಯು.ಕೆ.ಪಿ.ಯಲ್ಲಿ ಜಲವಿದ್ಯುತ್ ಯೋಜನೆ
ವಾಷಿಂಗ್ಟನ್	ಹೆಚ್‌ಒಕೆ ಇಂಟರ್ ನ್ಯಾಷನಲ್	ಹೊಸಪೇಟೆ ವಿದ್ಯುತ್ ಯೋಜನೆ
ವಾಷಿಂಗ್ಟನ್	ಹಾರ್ಜ್ ಇಂಜಿನಿಯರಿಂಗ್ ಕಂ.	ಶಿವನಸಮುದ್ರ ವಿದ್ಯುತ್ ಯೋಜನೆ
ವಾಷಿಂಗ್ಟನ್	ಕೋಜೆಂಟ್ರಿಕ್ಸ್	ಮಂಗಳೂರು ವಿದ್ಯುತ್ ಯೋಜನೆ
ವಾಷಿಂಗ್ಟನ್	ರೇಥಿಯಾನ್	ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು
ಕೂಪರ್ಟಿನೊ	ಟ್ಯಾಂಡೆಮ್ ಕಂಪ್ಯೂಟರ್ಸ್	ಕಂಪ್ಯೂಟರ್ ತಂತ್ರಜ್ಞಾನದ ಬಗ್ಗೆ
ಕೂಪರ್ಟಿನೊ	ನೋವೆಲ್ ಸಾಫ್ಟ್ ವೇರ್ ಕಂ.	ಕಂಪ್ಯೂಟರ್ ತಂತ್ರಜ್ಞಾನದ ಬಗ್ಗೆ
ಕೂಪರ್ಟಿನೊ	ಇಂಟೆಲ್‌ಚಿಪ್ ಮ್ಯಾನು ಫ್ಯಾಕ್ಚರಿಂಗ್ ಕಂ.	- ಅದೇ -
ಕೂಪರ್ಟಿನೊ	ವೆರಿಫೈನ್ ಕಂಪ್ಯೂಟರ್ ಕಂ. ಕಂಪ್ಯೂಟರ್ ಕಂ.	- ಅದೇ -
ಕೂಪರ್ಟಿನೊ	ಹೆವ್ಲೆಟ್ ಪ್ಯಾಕರ್ಡ್ ಕಂಪ್ಯೂಟರ್ ಕಂ.	- ಅದೇ -

ಈ ಎಲ್ಲ ಭೇಟಿಗಳಿಂದ ಉಪಯೋಗ ಆಗಿದೆ ಹಾಗೂ ಮುಂದೆ ಇನ್ನೂ ಹೆಚ್ಚಿನ ಉಪಯೋಗವಾಗುವುದೆಂದು ಭಾವಿಸಲಾಗಿದೆ.

ಪ್ರದೇಶ ಸಾರಿಗೆ ಇಲಾಖಾವತಿಯಿಂದ ನೀಡಿದ ಪರ್ಮಿಟ್‌ಗಳು

365 - ಶ್ರೀ ಕೆ. ಲಕ್ಷ್ಮಣ (ರಾಜಾಜೀನಗರ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾದೇಶಿಕ ಸಾರಿಗೆ ಇಲಾಖಾವತಿಯಿಂದ 1993-94ರಲ್ಲಿ ಖಾಸಗಿ ಹಾಗೂ ರಾಷ್ಟ್ರೀಕೃತ ಮಾರ್ಗಗಳಲ್ಲಿ ನೀಡಲಾದ ಪರ್ಮಿಟುಗಳೆಷ್ಟು?